**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನಾ ಸಿದ್ದಿ ಇವರು ನಿಯಮ 72 ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಜೂನ್ ತಿಂಗಳಿನಲ್ಲಿ ಪ್ರಾರಂಭವಾಗಿರುತ್ತವೆ. ಆದರೆ ಸರ್ಕಾರದ ವಸತಿ ನಿಲಯಗಳು ಜುಲೈ ತಿಂಗಳ ಅಂತ್ಯದವರೆಗೂ ಪ್ರಾರಂಭವಾಗಿರುವುದಿಲ್ಲ. ಹೀಗಾಗಿ ನಿಲಯಕ್ಕೆ ಅರ್ಜಿ ಹಾಕಿದ ವಿದ್ಯಾರ್ಥಿಗಳಿಗೆ ಸುಮಾರು ಒಂದುವರೆ ತಿಂಗಳುಗಳ ಕಾಲ ತಮ್ಮ ಊರುಗಳಿಂದ ಶಾಲೆಗೆ ಬರಲು ಸಾಧ್ಯವಾಗದೆ ಗೈರು ಹಾಜರಾಗುವುದು, ತಡವಾಗಿ ಶಾಲೆಗೆ ಬರುವುದು, ಬಸ್ಸಿನ ವ್ಯವಸ್ಥೆ ಇಲ್ಲದ ಕಡೆ ಸಾಯಂಕಾಲದವರೆಗೂ ಮಕ್ಕಳು ಮನೆಗೆ ತಲುಪದೆ ಇರುವುದು ಮುಂತಾದ ಅನೇಕ ಸಮಸ್ಯೆಗಳು ಉಂಟಾಗುತ್ತಿರುವುದರಿಂದ ಸರ್ಕಾರದ ವಸತಿ ನಿಲಯಗಳು ಜೂನ್ ತಿಂಗಳಿನಿಂದಲೇ ಪ್ರಾರಂಭವಾಗುವಂತೆ ಸರಕಾರ ಕ್ರಮಕೈಗೊಳ್ಳಬೇಕೆಂದು ನಿಯಮ 72ರ ಅಡಿಯಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ**

ಡಾ: ನಂಜುಂಡಪ್ಪ ವರದಿಯನ್ವಯ ಕರ್ನಾಟಕ ರಾಜ್ಯದ ವಿಶೇಷ ಅಭಿವೃದ್ಧಿ ಯೋಜನೆಯಡಿ ಶೈಕ್ಷಣಿಕವಾಗಿ ಹಿಂದುಳಿದ 86 ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗ/ ಅಲ್ಪಸಂಖ್ಯಾಂತರು/ ಬಿಪಿಎಲ್ ಕುಟುಂಬಗಳ ಹೆಣ್ಣು ಮಕ್ಕಳಿಗೆ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಕರ್ನಾಟಕ ಸರ್ಕಾರದ ಅನುದಾನದಡಿ ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕ ವಸತಿ ನಿಲಯಗಳನ್ನು 2010-11ನೇ ಸಾಲಿನಿಂದ ನಡೆಸಲಾಗುತ್ತಿದ್ದು, 2024-25ನೇ ಸಾಲಿಗೆ ಸದರಿ ವಸತಿ ನಿಲಯಗಳು ಮೇ 29 ರಿಂದಲೇ ಪ್ರಾರಂಭವಾಗಿರುತ್ತವೆ.

ಮುಂದುವರೆದು, ಪ್ರತಿ ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕ ವಸತಿ ನಿಲಯಗಳ ಗರಿಷ್ಠ ಮಿತಿ 100 ಇದ್ದು, ಜೂನ್ 2024ರ ಅಂತ್ಯಕ್ಕೆ ಒಟ್ಟು 5804 ವಿದ್ಯಾರ್ಥಿನಿಯರು ದಾಖಲಾಗಿ ವಸತಿ ನಿಲಯ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಪ್ರಸ್ತುತ ದಾಖಲಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

**ಸಂಖ್ಯೆ: ಇಪಿ 60 ಪಿಎಂಎ 2024**

**(ಎಸ್. ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಹಾಗೂ
ಶಿವಮೊಗ್ಗ ಜಿಲ್ಲೆ ಉಸ್ತುವಾರಿ ಸಚಿವರು